# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: 2017 ರಿಂದ 2023ನೇ ಕ್ಯಾಲೆಂಡರ್ ವರ್ಷದ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ವಾಪ್ರಯು 14 ವಾಪ್ರಸಿ 2001, ದಿ:19/10/2001.

2. ಸರ್ಕಾರದ ಇದೇ ಕ್ರಮಾಂಕದ ಆದೇಶ ದಿನಾಂಕ:26/06/2024.

3. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಪತ್ರ ಸಂ:ವಾಸಾಸಂಇ/ಸುಮಪ/ವಪ್ರಪ್ರ/2024-25, ದಿ.17/12/2024

-@@@@@-

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ, ಕರ್ನಾಟಕ ರಾಜ್ಯ ಸರ್ಕಾರವು ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಅರ್ಹ ಪತ್ರಕರ್ತರಿಗಾಗಿ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಸ್ಥಾಪಿಸಿ, ಈ ಪ್ರಶಸ್ತಿಗಳನ್ನು 2001ನೇ ಸಾಲಿನಿಂದಲೂ ನೀಡುತ್ತಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ 2017 ರಿಂದ 2023ನೇ ಕ್ಯಾಲೆಂಡರ್ ವರ್ಷದ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲು ಇಲಾಖಾ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಷಯ ತಜ್ಞರನ್ನೊಳಗೊಂಡ ತ್ರಿ-ಸದಸ್ಯ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

ಆಯ್ಕೆ ಸಮಿತಿಯು ಈ ಸಂಬಂಧ ಸ್ವೀಕೃತವಾಗಿದ್ದ ಅರ್ಜಿಗಳು ಮತ್ತು ನಾಮನಿರ್ದೇಶನಗಳ ಸಮಗ್ರ ಪರಿಶೀಲನೆ ಮತ್ತು ಸುದೀರ್ಘ ಪರಾಮರ್ಶೆಯ ತರುವಾಯ ದಿ.04/09/2024ರ ಸಭೆಯಲ್ಲಿ ಈ ಎರಡೂ ಪ್ರಶಸ್ತಿಗಳಿಗೆ ಅರ್ಹ 14 ಮಂದಿ ಪತ್ರಕರ್ತರನ್ನು ಆಯ್ಕೆ ಮಾಡಿ ವರದಿ ನೀಡಿರುವ ಹಿನ್ನೆಲೆಯಲ್ಲಿ 2017 ರಿಂದ 2023ನೇ ಸಾಲಿನ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಾಗಿ ಆಯ್ಕೆ ಮಾಡಿರುವ ಪತ್ರಕರ್ತರ ಹೆಸರುಗಳನ್ನು ಅನುಮೋದಿಸಿ, ಪ್ರಶಸ್ತಿ ಮೊತ್ತವಾದ ತಲಾ ರೂ.1.00 ಲಕ್ಷಗಳಂತೆ ಒಟ್ಟು ರೂ.14.00 ಲಕ್ಷಗಳ ನಗದು, ಪ್ರಶಸ್ತಿ ಪ್ರದಾನ ಸಮಾರಂಭ, ಕಾರ್ಯಕ್ರಮ ನಿರ್ವಹಣಾ ವೆಚ್ಚ ರೂ.9.00 ಲಕ್ಷಗಳು ಸೇರಿದಂತೆ ಒಟ್ಟು ರೂ.23.00 ಲಕ್ಷಗಳ ವೆಚ್ಚವನ್ನು 2024-25ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2220-60-106-0-05 ಸರ್ಕಾರಿ ಕಾರ್ಯಕ್ರಮಗಳ ಪ್ರಚಾರ ಮತ್ತು ಮಾಹಿತಿ ಶಿಕ್ಷಣ ಸಂವಹನ 059 ಇತರೆ ವೆಚ್ಚಗಳು ಅಡಿಯಲ್ಲಿ ಭರಿಸಲು ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## <u>ಸರ್ಕಾರದ ಆದೇಶ ಸಂಖ್ಯೆ:ಕೆಸಿಐ-ವಿಪಿಪಿ/45/2023 ಬೆಂಗಳೂರು, ದಿನಾಂಕ:30/12/2024</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಹಿರಿಯ ಪತ್ರಕರ್ತರನ್ನು 2017 ರಿಂದ 2023ನೇ ಕ್ಯಾಲೆಂಡರ್ ವರ್ಷದ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆಯಾಗಿರುವುದಾಗಿ ಘೋಷಿಸಲು ಸರ್ಕಾರವು ಹರ್ಷಿಸುತ್ತದೆ.

| ಪ್ರಶಸ್ತಿಯ ಹೆಸರು | ಪ್ರಶಸ್ತಿಯ ವರ್ಷ | ಪ್ರಶಸ್ತಿ ವಿಜೇತರ ವಿವರ |
|---|---|---|
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2017ನೇ ಸಾಲಿಗೆ | ಶ್ರೀಮತಿ ವಿಜಯಲಕ್ಷ್ಮೀ ಶಿಬರೂರು- ಡಿಜಿಟಲ್ ಮಿಡಿಯಾ ಹಿರಿಯ ಪತ್ರಕರ್ತರು, ಕೇ/ಆಫ್ ಪಳನಿ, 7ನೇ ಕ್ರಾಸ್, ಜೆ.ಸಿ.ನಗರ, ಬೆಂಗಳೂರು-560089 ಮೊ:9945147391 |

| | | |
|---|---|---|
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2017ನೇ ಸಾಲಿಗೆ | ಶ್ರೀ ಚೀ.ಜ.ರಾಜೀವ್, ಸುದ್ದಿಸಂಪಾದಕರು, ವಿಜಯಕರ್ನಾಟಕ ನಂ.105, ಕೆ.ಬಿ.ಎಲ್ ಸೆಂಚುರಿ, ಫೇಸ್-1, ಮಾಲೆಗಾಲದ ಮಾರಮ್ಮ ದೇವಾಲಯ ಸಮೀಪ, ಲಿಂಗಾಂಬುದಿ ರಾಯನಕೆರೆ ಅಂಚೆ, ಮೈಸೂರು ಮೊ: 9845185592 |
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2018ನೇ ಸಾಲಿಗೆ | ಶ್ರೀ ಬಿಎಂಟಿ ರಾಜೀವ್, ಭಾ.ಅ.ಸೆ(ನಿ), ಹವ್ಯಾಸಿಪತ್ರಕರ್ತರು ನಂ.5/709,5ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಎಂ.ಸಿ.ಬಡಾವಣೆ, ಬೆಂಗಳೂರು-560040 ಮೊ: 9632781811 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2018ನೇ ಸಾಲಿಗೆ | ಶ್ರೀ ದೇವಯ್ಯ ಗುತ್ತೇದಾರ್ ಸ್ಥಾನಿಕ ಸಂಪಾದಕರು, ವಿಜಯಕರ್ನಾಟಕ ದಿನಪತ್ರಿಕೆ ನಂ-01-855/2,ಅಕ್ಷರ ಶ್ಯಾಮ, ಮೊದಲ ಮಹಡಿ, ಹಳೆ ಜೇವರ್ಗಿ ರಸ್ತೆ, ಕಲಬುರಗಿ-585102, ಮೊ: 9900535696 |
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2019ನೇ ಸಾಲಿಗೆ | ಶ್ರೀ ವಿನೋದ ನಾಯ್ಕ, ಸಂಪಾದಕರು-ವಿಶೇಷ ಯೋಜನೆಗಳು ಏಷ್ಯಾನೆಟ್ ಸುವರ್ಣ ನ್ಯೂಸ್ ನಂ.9 "ವಿಸ್ಮಿತಾ" 7ನೇ ಕ್ರಾಸ್, ಸಪ್ತಗಿರಿ ಮೆಡೋಸ್, ಸಪ್ತಗಿರಿನಗರ, ಹೊಸಕೆರೆಹಳ್ಳಿ ಬೆಂಗಳೂರು-560085, ಮೊ:9632201515 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2019ನೇ ಸಾಲಿಗೆ | ಶ್ರೀ ಗಿರೀಶ್ ಲಿಂಗಣ್ಣ, ಅಂಕಣಕಾರರು ನಂ. 172, 10ನೇ ಮೈನ್, 9ನೇ ಬ್ಲಾಕ್, 2ನೇಸ್ಟೇಜ್, ನಾಗರಬಾವಿ, ಬೆಂಗಳೂರು-560072 ಮೊ:9845099196 |
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2020ನೇ ಸಾಲಿಗೆ | ಶ್ರೀ ಮಾಲತೇಶ ಅಂಗೂರ, ಮುಖ್ಯ ವರದಿಗಾರರು, ಕೌರವ ಪತ್ರಿಕೆ ಮುಖ್ಯ ವರದಿಗಾರರು, ಕೌರವ ದಿನ ಪತ್ರಿಕೆ, ಕೂಲಿಯವರ ಓಣಿ, ಅಗ್ರಹಾರ ಹಿಂಭಾಗ, ಹಾವೇರಿ-581110 ಮೊ:9448029417 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2020ನೇ ಸಾಲಿಗೆ | ಶ್ರೀ ಯೋಗೇಶ್ ಎಂ.ಎನ್ ಹಿರಿಯ ವರದಿಗಾರರು, ಪ್ರಜಾವಾಣಿ ದತ್ತಕೃಪ ನಿಲಯ, ಜೋಗಿಮಟ್ಟಿ ರಸ್ತೆ, 6ನೇ ಕ್ರಾಸ್, ಪ್ರಶಾಂತ್ ನಗರ, ಚಿತ್ರದುರ್ಗ-577501 ಮೊ: 8618384012 |
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2021ನೇ ಸಾಲಿಗೆ | ಶ್ರೀ ಸುಧೀರ್ ಶೆಟ್ಟಿ, ಹವ್ಯಾಸಿ ಪರಿಸರ ಛಾಯಾಗ್ರಾಹಕರು ಟಿ.ಜಿ ಆಸ್ಟೈರ್, ಜಿ-10, ಬಿ.ಟಿ.ಎಂ 4ನೇ ಹಂತ, ನೆನಪನಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 ಮೊ:9980462471, 9141778909 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2021ನೇ ಸಾಲಿಗೆ | ಶ್ರೀ ನೌಶಾದ್ ಬಿಜಾಪುರ, ಹಿರಿಯ ಸಹಾಯಕ ಸಂಪಾದಕರು, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ಬೆಳಗಾವಿ ಪ್ಲಾಟ್ ನಂ. 10, 5ನೇ ತಿರುವು, ಸಾಬ್ ರೆಸಿಡೆನ್ಸಿ ಹತ್ತಿರ, ಆಜಮ್ ನಗರ, ಬೆಳಗಾವಿ-590 001 ಮೊ:9845829390 |

| | | |
|---|---|---|
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2022ನೇ ಸಾಲಿಗೆ | ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ, ಹವ್ಯಾಸಿ ಪತ್ರಕರ್ತರು, ನಂ.17, ತೆನೆಸಾರ ಬಡಾವಣೆ, ವಕ್ಕೋಡಿ, ತುಮಕೂರುಜಿಲ್ಲೆ, ಮೊ:9686194641 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2022ನೇ ಸಾಲಿಗೆ | ಶ್ರೀ ಸತೀಶ್ ಜಿ.ಟಿ. ಹಿರಿಯ ಸಹ ಸಂಪಾದಕರು, ದಿ ಹಿಂದೂ ಆಂಗ್ಲ ದಿನ ಪತ್ರಿಕೆ, S/O ತಮ್ಮಣ್ಣ ಎಸ್, ಶ್ರೀ ರೇವಣಸಿದ್ದೇಶ್ವರ ನಿಲಯ, ಭೀಮಪ್ಪ ನಾಯಕ ರಸ್ತೆ, 2ನೇ ಕ್ರಾಸ್, ಒಕ್ಕಲಿಗರ ಹಾಸ್ಟೆಲ್ ಹಿಂಭಾಗ, ಚಿತ್ರದುರ್ಗ-577501, ಮೊ:9591228689 |
| ಪರಿಸರ ಪತ್ರಿಕೋದ್ಯಮ ಪ್ರಶಸ್ತಿ | 2023ನೇ ಸಾಲಿಗೆ | ಶ್ರೀ ಆರ್.ಮಂಜುನಾಥ (ಕೆರೆ ಮಂಜುನಾಥ), ಪ್ರಧಾನ ವರದಿಗಾರರು ಪ್ರಜಾವಾಣಿ ದಿನಪತ್ರಿಕೆ ನಂ.02 "ಚಿರಾಗ್", 1ನೇ ಮುಖ್ಯರಸ್ತೆ, ಎ ಬ್ಲಾಕ್, ಜಯಣ್ಣ ಲೇಔಟ್, ರಾಜರಾಜೇಶ್ವರಿ ದೇವಸ್ಥಾನದ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು-560098, ಮೊ:9448081174 |
| ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ | 2023ನೇ ಸಾಲಿಗೆ | ಶ್ರೀ ಎಸ್.ಗಿರೀಶ್ ಬಾಬು, ಕಾರ್ಯನಿರ್ವಾಹಕ ಸಂಪಾದಕರು ಕನ್ನಡಪ್ರಭ ದಿನಪತ್ರಿಕೆ, ಗಿರಿಧಾಮ,ನಂ.29, ಜಲದರ್ಶಿನಿ ಲೇಔಟ್, ಆರ್ ಎಂವಿ 2ನೇ ಸ್ಟೇಜ್, ರೇವಾ ಕಾಲೇಜು ಹತ್ತಿರ,ಬೆಂಗಳೂರು-560094. ಮೊ: 9844213028 |

ಸದರಿ ಪ್ರಶಸ್ತಿಗೆ ನಿಗದಿಪಡಿಸಿರುವ ನಗದು ಮೊತ್ತವಾದ ತಲಾ ರೂ.1.00 ಲಕ್ಷಗಳಂತೆ ಒಟ್ಟು ರೂ.14.00 ಲಕ್ಷಗಳು, ಪ್ರಶಸ್ತಿ ಪ್ರದಾನ ಸಮಾರಂಭ, ಕಾರ್ಯಕ್ರಮ ನಿರ್ವಹಣಾ ವೆಚ್ಚ ರೂ.9.00 ಲಕ್ಷಗಳು ಸೇರಿದಂತೆ ಒಟ್ಟು ರೂ.23.00 ಲಕ್ಷ (ರೂಪಾಯಿ ಇಪ್ಪತ್ತಮೂರು ಲಕ್ಷ) ಮಾತ್ರಗಳ ವೆಚ್ಚವನ್ನು 2024-25ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2220-60-106-0-05 ಸರ್ಕಾರಿ ಕಾರ್ಯಕ್ರಮಗಳ ಪ್ರಚಾರ ಮತ್ತು ಮಾಹಿತಿ ಶಿಕ್ಷಣ ಸಂವಹನ 059 ಇತರೆ ವೆಚ್ಚಗಳು ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್ ಡಿ 05 ಟಿಎಫ್‌ಪಿ 2024, ದಿ:07.10.2024ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

M. Jacintha 30/12/2024
(ಎಂ.ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ವಾರ್ತಾ ಇಲಾಖೆ).

ಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.

4.....

4. ಜಂಟಿ ನಿರ್ದೇಶಕರು, ರಾಜ್ಯ ಹೂಜೂರ್ ಖಜಾನೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಅಪರ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರಿಗೆ (ವಾರ್ತಾ ಆಯುಕ್ತರ ಮುಖಾಂತರ)
8. ಪ್ರಶಸ್ತಿ ವಿಜೇತ ಪತ್ರಕರ್ತರು ಹಾಗೂ ಸಂಪಾದಕರು (ವಾರ್ತಾ ಆಯುಕ್ತರ ಮುಖಾಂತರ).
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5&7), ವಿಧಾನಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.